ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 1745/2024

**ಪಿರ್ಯಾದಿಃ** ಸರಕಾರದ ಪರ ಪೋಲಿಸ್ ವೃತ್ತ ನಿರೀಕ್ಷಕರು,
ತೆಕ್ಕಲಕೋಟೆ ವೃತ್ತ, ತೆಕ್ಕಲಕೋಟೆ .

-ವಿರುದ್ಧ–

ಆರೋಪಿತರು ಃ

ಎ1) ಮುದ್ದುರಾಜ ಬಿನ್ ರುದ್ರಪ್ಪ, ವಃ 49 ವರ್ಷ, ವಾಸಃ ಚಿಪ್ಪಿನಕೆರೆ ಗ್ರಾಮ, ಚಿತ್ರದುರ್ಗ ತಾಃ ಜಿಃ

ಎ2) ತಿಪ್ಪೇಸ್ವಾಮಿ ಯಾನೆ ತಿಪ್ಪೇಶ್ ಬಿನ್ ರುದ್ರಪ್ಪ ವಃ 45 ವರ್ಷ, ವಾಸಃ 8 ನೇ ಕ್ರಾಸ್, ಆಂಜನೇಯ ಗುಡಿ ಹಿಂಭಾಗ, ಚಪ್ಪರದಹಳ್ಳಿ ಗ್ರಾಮ, ಹೊಸಪೇಟೆ ತಾಃ ವಿಜಯನಗರ ಜಿಃ

## ದೋಷಾರೋಪಣೆ

ನಾನು ಶ್ರೀ ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ಆರೋಪಿತರಾದ ನೀವುಗಳು ಚಾಸಾ-14 ರವರ ಹೆಸರಿನಲ್ಲಿ ಖರೀದಿಸಿದ್ದ ನೀಲಿ ಬಣ್ಣದಿಂದ ಕೂಡಿದ ಟಾಟಾ ಇಂಟ್ರಾ ವಾಹನ ನಂ.ಕೆಎ-35/ಡಿ-2683 ನೇದ್ದನ್ನು ಚಲಾಯಿಸಿಕೊಂಡು ಬಂದು 2023 ನೇ ವರ್ಷದ ಮೇ ತಿಂಗಳ ಕೊನೆಯ ವಾರದಲ್ಲಿ ಸಿರುಗುಪ್ಪ ಪೋಲಿಸ್ ಠಾಣಾ ವ್ಯಾಪ್ತಿಯ ಗಜಿಗೆನಹಾಳು ಗ್ರಾಮದ ಗೋಡನ್ನಿನಲ್ಲಿಟ್ಟದ್ದ ಚಾಸಾ-13 ರವರು ಈಗಾಗಲೇ ಸಿರುಗುಪ್ಪ ಠಾಣೆಯಲ್ಲಿ ಸಲ್ಲಿಸಿರುವ ಕೇಸಿಗೆ ಸಂಬಂಧಿಸಿದ 60 ಭತ್ತ ತುಂಬಿದ ಚೀಲಗಳನ್ನು ಮತ್ತು 2023 ನೇ ವರ್ಷದ ಜುಲೈ ತಿಂಗಳ ದಿನಾಂಕ 14-07-2023 ರಿಂದ ಬೆಳಗಿನ ಜಾವ 1.00 ಗಂಟೆಯಿಂದ 24-07-2023 ರಂದು ಬೆಳಗಿನ ಜಾವ 2.30 ಗಂಟೆಯ ಅವಧಿಯಲ್ಲಿ ಆಗಾಗ ರಾತ್ರಿ ಮತ್ತು ಬೆಳಗಿನ ಜಾವದ ಸಮಯದಲ್ಲಿ ಚಾಸಾ-1 ರವರು ತಮ್ಮ ಗೋಡನ್ನಿನಲ್ಲಿ ಸಂಗ್ರಹಿಸಿಟ್ಟದ್ದ ಒಟ್ಟು 270 ಭತ್ರ ತುಂಬಿದ ಚೀಲಗಳನ್ನು ಕಳ್ಳತನ ಮಾಡಲು ವಂಚು ಹಾಕಿ ಗೋಡೌನ್ ಗೆ ಹಾಕಿದ್ದ ಬೀಗವನ್ನು ಹೊಡೆದು ಕನ್ನ ಹಾಕಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.,

ಮುಂದುವರೆದು ಈ ಮೇಲೆ ತಿಳಿಸಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ನಂತರ ಸದರಿ ಚೀಲಗಳನ್ನು ಕಳ್ಳತನ ಮಾಡುವುದಕ್ಕಿಂತಲೂ ಮುಂಚೆಯೇ ಚಾಸಾ-12 ರವರಿಗೆ ತಾವು ನೆಲ್ಲು ಖರೀದಿ ಮಾಡುವ ಬೋಕರ್ ಗಳೆಂದು ಪರಿಚಯಿಸಿಕೊಂಡು ಸುಳ್ಳು ಹೇಳಿ, ಚಾಸಾ-12 ರವರಿಂದ ಗೋಡನ್ ಬಾಡಿಗೆಗೆ ಪಡೆದುಕೊಂಡಿದ್ದು, ಸದರಿ ಗೋಡನ್ನಿನಲ್ಲಿಟ್ಟದ್ದ ಸಿರುಗುಪ್ಪ ಪೋಲಿಸ್ ಠಾಣೆ ಗುನ್ನೆ ನಂ.114/2023 ಕ್ಕೆ ಸಂಬಂಧಿಸಿದ 60 ಭತ್ತ ತುಂಬಿದ ಚೀಲಗಳನ್ನು ಮತ್ತು ಚಾಸಾ-1 ರವರ ಗೋಡನ್ ನಲ್ಲಿ 2023 ನೇ ಸಾಲಿನ ಜುಲೈ ತಿಂಗಳಿನಲ್ಲಿ ಆಗಾಗ ಕಳ್ಳತನ ಮಾಡಿದ 270 ಭತ್ತ ತುಂಬಿದ ಚೀಲಗಳು ಒಟ್ಟು 330 ಭತ್ತ ತುಂಬಿದ ಚೀಲಗಳನ್ನು ಕಳ್ಳತನ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

(ಅಶೋಕ್ ಆರ್.ಹೆಚ್.)

**ದಿನಾಂಕಃ** 20.05.2025 ಪ್ರ.ದ.ನ್ಯಾ.ದಂ., ಸಿರುಗುಪ್ಪ.

सिविल् ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 1745/2024

**ಫಿರ್ಯಾದಿಃ** ಸರಕಾರದ ಪರ ಪೋಲಿಸ್ ವೃತ್ತ ನಿರೀಕ್ಷಕರು,
ತೆಕ್ಕಲಕೋಟೆ ವೃತ್ತ, ತೆಕ್ಕಲಕೋಟೆ .

-ವಿರುದ್ಧ–

ಆರೋಪಿತರು ಃ

ಎ1) ಮುದ್ದುರಾಜ ಬಿನ್ ರುದ್ರಪ್ಪ, ವಃ 49 ವರ್ಷ, ವಾಸಃ ಚಿಪ್ಪಿನಕೆರೆ ಗ್ರಾಮ, ಚಿತ್ರದುರ್ಗ ತಾಃ ಜಿಃ

ಎ2) ತಿಪ್ಪೇಸ್ವಾಮಿ ಯಾನೆ ತಿಪ್ಪೇಶ್ ಬಿನ್ ರುದ್ರಪ್ಪ ವಃ 45 ವರ್ಷ, ವಾಸಃ 8 ನೇ ಕ್ರಾಸ್, ಆಂಜನೇಯ ಗುಡಿ ಹಿಂಭಾಗ, ಚಪ್ಪರದಹಳ್ಳಿ ಗ್ರಾಮ, ಹೊಸಪೇಟೆ ತಾಃ ವಿಜಯನಗರ ಜಿಃ

<u>ಆರೋಪಣೆ</u>

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ ಆ-1

ಆ-2

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?

**ಉತ್ತರಃ** ಆ-1

ಆ-2

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿತರಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).

**ದಿನಾಂಕಃ** 20.05.2025. **ಪ್ರ. ದ. ನ್ಯಾ. ದಂ., ಸಿರುಗುಪ್ಪ.**